## ದೇಶಭಕ್ತಿ ತುಂಬುವ ತಾಣ

‘ಹುಸೇನಿವಾಲ; ಸರಹದ್ದಿನಲ್ಲಿ ಹುತಾತ್ಮರ ಸ್ಮರಣೆಯ ತಾಣ’ (ಆ. 31, ಡಾ. ಕೀರ್ತಿ ಮಲ್ಹೋತ್ರ) ಲೇಖನ, ದೇಶಕ್ಕಾಗಿ ಮಡಿದ ಸ್ವಾತಂತ್ರ್ಯ ಯೋಧರ ಅಪರೂಪದ ತಾಣವನ್ನು ಪರಿಚಯ ಮಾಡಿಕೊಟ್ಟಿತು. ಹುಸೇನಿವಾಲ ಸ್ಥಳ ಪರಿಚಯದೊಂದಿಗೆ, ಶಹೀದ್ ಎ. ಆಸಮ್ ಭಗತ್ ಸಿಂಗ್, ಶಹೀದ್ ಶಿವರಾಮ್ ರಾಜಗುರು ಹಾಗೂ ಶಹೀದ್ ಸುಖ್‌ದೇವ್ ಥಾಪರ್ ಅವರ ದೇಶಪ್ರೇಮ– ತ್ಯಾಗದ ಕಥೆಯನ್ನೂ ಲೇಖನ ಬಿತ್ತರಿಸಿತು.

—ರಾಜಶೇಖರ್ ಎಚ್.ಎಸ್., ಬೆಂಗಳೂರು

## ಕಾರ್ಲಾದಲ್ಲಿ ಕಳೆದುಹೋದೆ

‘ನಿಸರ್ಗ ಬರೆದ ಕಾರ್ಲಾ ಕಾವ್ಯ’ (ಆ. 31, ಪ್ರಸಾದ್ ಶೆಣೈ ಆರ್.ಕೆ.) ಪ್ರವಾಸ ಲೇಖನ ಸೊಗಸಾಗಿ ಓದಿಸಿಕೊಂಡು ಸಾಗಿತು. ಹಸುರು ಮೆತ್ತಿದ ಲೋಣಾವಲಾದ ಮೋಹಕ ಚೆಲುವನ್ನು, ಕಾರ್ಲಾ ಗುಹೆಗಳ ಕಲಾ ಸೌಂದರ್ಯವನ್ನು, ಮಳೆ ನಡುವೆ ಎದ್ದು ಕಾಣುವ ಗಿರಿಶಿಖರಗಳ ಸೊಬಗನ್ನು ವರ್ಣಿಸಿರುವ ರೀತಿ ಅದ್ಭುತ. ಪ್ರಕೃತಿ ಸೌಂದರ್ಯಕ್ಕೆ, ಲೇಖಕರ ವರ್ಣನೆ ತಕ್ಕಂತಿದೆ. ಲೇಖನ ಓದುತ್ತಾ ನಾನೂ ಕಾರ್ಲಾದಲ್ಲಿ ಕಳೆದುಹೋದಂತೆನಿಸಿತು.

—ಧಾರಿಣಿ, ಮೈಸೂರು



## ಅಪರೂಪದ ಲೇಖನಮಾಲೆ

‘ಇಬ್ಬರು ನೊಬೆಲ್ ವಿಜೇತರ ನೆನಪುಗಳ ಬೀದಿಯಲ್ಲಿ’ (ಆ. 31, ಸಿಡ್ಲಿ ಶ್ರೀನಿವಾಸ್) ‘ವಿಜ್ಞಾನಿಗಳ ಮಹಾಸನ್ನಿಧಿಯಲ್ಲಿ’ ಲೇಖನಮಾಲೆಯಲ್ಲಿ ಪ್ರಕಟಗೊಂಡ ಬರಹ ಉಪಯುಕ್ತವಾಗಿದೆ. ವಿಜ್ಞಾನದಲ್ಲಿ ಅನ್ವೇಷಣೆಗಳಿಗೆ ನಾಂದಿ ಹಾಡಿದ, ಮನುಕುಲಕ್ಕೆ ನೆರವಾಗುವ ಹಲವು ಸಂಶೋಧನೆ ಮಾಡಿದ ವಿಜ್ಞಾನಿಗಳ ಬದುಕಿನ ಕುರಿತ ಕುತೂಹಲಕಾರಿ ಮಾಹಿತಿಗಳಿವೆ. ಇದು ಅಪರೂಪ ಹಾಗೂ ಸಂಗ್ರಹಯೋಗ್ಯ ಬರಹ.

—ಗುರುಮೂರ್ತಿ, ಧಾರವಾಡ

## ಮಕ್ಕಳಿಗೆ ಬುದ್ಧಿ ಹೇಳುವುದು ಹೇಗೆ?

‘ದಂಡಂ ದಶಗುಣಂ’ (ಆ. 24, ಡಾ. ನಾಗರಾಜು ಜಿ.ಬಿ. ಭೈರೇನಹಳ್ಳಿ) ಪ್ರಬಂಧ ಸಮಕಾಲೀನ ಸಮಸ್ಯೆಗೆ ಕನ್ನಡಿ ಹಿಡಿದಿದೆ. ಇತ್ತೀಚೆಗೆ, ಶಾಲೆಯಿಂದ ಬಂದ ನನ್ನ ಆರು ವರ್ಷದ ಮೊಮ್ಮಗ ಮುಖ ತೊಳೆಯಲು ಹಟ ಮಾಡಿದಾಗ ಒಂದೇಟು ಕೊಟ್ಟು, ಕಿವಿ ಹಿಂಡಿದೆ. ತಕ್ಷಣವೇ ಕೋಪಗೊಂಡ ಅವನು ಪಟಪಟನೆ ನನಗೆ ಹತ್ತೇಟು ಕೊಟ್ಟು, ಫೋನೆತ್ತಿಕೊಂಡು ಕಚೇರಿಯಲ್ಲಿದ್ದ ಅವರ ಅಮ್ಮನಿಗೆ (ನನ್ನ ಸೊಸೆಗೆ) ಫೋನಾಯಿಸಿದ. ಜೋರಾಗಿ ಅಳುತ್ತಾ, ‘ಅಮ್ಮ ಬೇಗ ಬಾ ಈ ಅಜ್ಜಿ ನನಗೆ ಹೊಡೀತಿದ್ದಾರೆ. ಅವರಿಗೆ ಹೇಳು ನನ್ನ ಬಾಡಿ ಪಾರ್ಟ್ಸ್ ಮುಟ್ಟಬಾರದು ಅಂತ’ ಎಂದು ದೂರಿದ. ನನ್ನ ಮೂರು ಮಕ್ಕಳು ತಪ್ಪು ಮಾಡಿದಾಗ ತಿದ್ದಿ ಬೆಳೆಸಿರುವ ನಾನು, ಈ ಪೋರನಿಗೆ ಹೇಗೆ ಬುದ್ಧಿ ಹೇಳುವುದು ಎಂದು ಚಿಂತೆಯಾಯಿತು.

—ಕೆ. ಕೃಷ್ಣಕುಮಾರಿ, ಬೆಂಗಳೂರು

## ಕಿರಿಯರಿಗೆ ಸ್ಫೂರ್ತಿ

‘ಕನಸು ಕಲ್ಪವೃಕ್ಷ; ವಿಶ್ವವಿಖ್ಯಾತರ ಅಪ್ರಖ್ಯಾತ ಕನಸುಗಳು’ (ಆ. 31, ಗುರುರಾಜ ಎಸ್. ದಾವಣಗೆರೆ), ವಿಶ್ವವಿಖ್ಯಾತ ವಿಜ್ಞಾನಿಗಳು ತಮ್ಮ ಕನಸುಗಳನ್ನು ನನಸಾಗಿಸಿಕೊಂಡ ಕಥನ ಕುತೂಹಲಕಾರಿಯಾಗಿತ್ತು. ವಿಜ್ಞಾನಿಗಳ ಸಾಧನೆಗೆ ಪ್ರೇರಣೆ ನೀಡಿದ ಕನಸುಗಳು, ಅದನ್ನು ನನಸು ಮಾಡಿಕೊಳ್ಳಲು ಆ ಕನಸುಗಳ ಬೆನ್ನುಬಿದ್ದು, ನಿರಂತರವಾಗಿ ತುಡಿದ ಅವರ ಶ್ರದ್ಧೆ, ಶಿಸ್ತು ಕಂಡು ಅಚ್ಚರಿಯಾಯಿತು. ಕೊನೆಗೂ ಕನಸನ್ನು ನನಸು ಮಾಡಿಕೊಂಡು ಸಾಧನೆಯ ಹೊಸ ಅಧ್ಯಾಯ ಬರೆದ ದೊಡ್ಡವರ ಕಥನ ಕಿರಿಯರಿಗೆ ಸ್ಫೂರ್ತಿದಾಯಕವಾಗಿದೆ, ಸ್ವಾರಸ್ಯಕರವೂ ಆಗಿದೆ.

—ರವಿಕಿರಣ್ ಎಚ್.ಎಂ., ಬೆಳಗಾವಿ

## ನನ್ನ ಕನಸೂ ನನಸಾಯಿತು...

ವಿಶ್ವವಿಖ್ಯಾತರ ಕನಸುಗಳ ಕುರಿತ ಮುಖಪುಟ ಲೇಖನ ಬಹಳ ಚೆನ್ನಾಗಿದೆ. ಈ ಕನಸು ನನಸಾದ ಅನುಭವ ಸಾಮಾನ್ಯರಲ್ಲಿ ಸಾಮಾನ್ಯಳಾದ ನನಗೂ ಆಗಿದೆ. ಜೀವವಿಮಾ ನಿಗಮದಲ್ಲಿ (LIC) ಕೆಲಸ ಮಾಡುತ್ತಿದ್ದಾಗ ಲೆಕ್ಕಪತ್ರ ವಿಭಾಗದಲ್ಲಿ ಬ್ಯಾಂಕ್ ರಿಕನ್ಸಿಲಿಯೇಷನ್ ಟ್ಯಾಲಿ ಆಗದೆ ಅದೇ ಗುಂಗಿನಲ್ಲಿ ಮಲಗಿದಾಗ ಕನಸಿನಲ್ಲಿ ನಾನು ಹುಡುಕುತ್ತಿದ್ದ ಎಂಟ್ರಿ ಸಿಗುತ್ತಿತ್ತು. ಬೆಳಿಗ್ಗೆ ಎದ್ದಾಗ ಮರೆತು ಹೋಗುತ್ತದೆಂದು ಆಗಲೇ ಎದ್ದು ಬರೆದಿಟ್ಟುಕೊಳ್ಳುತ್ತಿದ್ದೆ. ಇದು ನನ್ನ ಮಟ್ಟಿಗೆ ಕನಸನ್ನು ನನಸಾಗಿಸಿಕೊಂಡ, ಸಮಸ್ಯೆಗೆ ಪರಿಹಾರ ಕಂಡುಕೊಂಡ ಅನುಭವ.

—ಗೀತಾ ರಾಮಚಂದ್ರ, ಬೆಂಗಳೂರು



## ಹಲವು ವಿಶೇಷಗಳ ‘ಸುಧಾ’

ಆಗಸ್ಟ್ 31ರ ಸಂಚಿಕೆ ತುಂಬಾ ಇಷ್ಟವಾಯಿತು. ‘ಕನಸು ಕಲ್ಪವೃಕ್ಷ’ ಮುಖಪುಟ ಲೇಖನ ಚೆನ್ನಾಗಿದೆ. ವಿಜ್ಞಾನಿಗಳ ಸಂಶೋಧನೆಗಳಿಗೆ ಕನಸೇ ಕಾರಣ ಎನ್ನುವುದನ್ನು ಓದಿ ಕನಸಿಗೂ ಮನಸ್ಸಿಗೂ ಇರುವ ನಂಟು ತಿಳಿಯಿತು. ನಮ್ಮಲ್ಲಿ ಒಳ್ಳೆಯ ಭಾವನೆ, ಗುರಿ, ಒಳ್ಳೆಯ ಕಲ್ಪನೆಗಳಿದ್ದರೆ ಅವು ಎಂದಾದರೊಂದು ದಿನ ನನಸಾಗುತ್ತವೆ ಎನ್ನುವುದಕ್ಕೆ ವಿಜ್ಞಾನಿಗಳ ಕುರಿತ ಈ ಸಚಿತ್ರ ಲೇಖನವೇ ಸಾಕ್ಷಿ.

ಪ್ರಸಾದ್ ಶೆಣೈ ಆರ್.ಕೆ. ಅವರ ಪ್ರವಾಸ ಕಥನ ‘ನಿಸರ್ಗ ಬರೆದ ಕಾರ್ಲಾ ಕಾವ್ಯ’ ಚೆನ್ನಾಗಿ ಮೂಡಿಬಂದಿದೆ. ಮಹಾರಾಷ್ಟ್ರದ ಸುಂದರ ಗುಹೆಗಳು, ನಿಸರ್ಗದ ಮಡಿಲಲ್ಲಿ ಶಿಲ್ಪಿಯ ಚಾತುರ್ಯ, ಶಿಲ್ಪಗಳ ಮೋಹಕ ಚಿತ್ರಗಳು ಮನಸ್ಸಿಗೆ ಮುದ ಎನಿಸಿದವು.

ಸಿಡ್ಲಿ ಶ್ರೀನಿವಾಸ್ ಅವರ ‘ಇಬ್ಬರು ನೊಬೆಲ್ ವಿಜೇತರ ನೆನಪುಗಳ ಬೀದಿಯಲ್ಲಿ’ ಲೇಖನ ಓದಿ ನನ್ನ ಮನಸ್ಸು 40–50 ವರ್ಷಗಳ ಹಿಂದೆ ಓಡಿತು. 60ರ ದಶಕದ ನಾನು ವಿದ್ಯಾರ್ಥಿಯಾಗಿದ್ದಾಗ ಪಠ್ಯಪುಸ್ತಕದಲ್ಲಿ ಮೇರಿ ಕ್ಯೂರಿ ಪಾಠವಿದ್ದ ನೆನಪು ಮರುಕಳಿಸಿತು. ಅವರ ಕಥೆಗಳನ್ನಷ್ಟೇ ಓದಿದ್ದ ನನಗೆ, ಸಚಿತ್ರ ಲೇಖನ ಖುಷಿ ಕೊಟ್ಟಿತು.

—ನೀಲಮ್ಮ ಕುಮಾರಪ್ಪ, ರಾಯಚೂರು



## ಬೆಂಗಳೂರಿನ ಮುಖಗಳ ಪರಿಚಯ

‘ಬೆಳೆದಿದೆ ನೋಡಾ ಬೆಂಗಳೂರು ನಗರ’ (ಆ. 31, ಪದ್ಮಾ ಶ್ರೀರಾಮ) ಲೇಖನ ಅತ್ಯುತ್ತಮವಾಗಿದೆ. ಹಳೆಯ ಬೆಂಗಳೂರಿನ ಹಲವು ಚಿತ್ರಗಳನ್ನು ಕಣ್ಣಮುಂದೆ ತಂದಂತಾಯಿತು. ಇಂತಹ ಉಪಯುಕ್ತ, ಕುತೂಹಲಕರ ಲೇಖನಗಳು ಇನ್ನಷ್ಟು ಪ್ರಕಟವಾಗಲಿ.

—ಪುಂಡರೀಕರಾವ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in